ಶ್ರೀ ಮೊಹಿದ್ದೀನ್.—ಘಟನೆ ನಡೆದದ್ದು ೧೮-೬-೧೯೮೦ ರಂದು. ಈ ಘಟನೆ ಬಗ್ಗೆ ನಾವು ೨೮-೬-೧೯೮೦ ರಂದು ಸೂಚನೆ ಕೊಟ್ಟಾಗ ಮತ್ತು ಈ ಘಟನೆ ಪತ್ರಿಕೆಯಲ್ಲಿ ವರದಿಯಾದ ಮೇಲೆ ಪೋಲಿಸರು ಕ್ರಮ ಕೈಗೊಂಡಿದ್ದಾರೆ. ಈ ವಿಳಂಬವೇತಕ್ಕೆ? ದೂರು ಕೊಟ್ಟರೂ ಕೂಡ ಪೋಲಿಸರು ಕ್ರಮ ತೆಗೆದುಕೊಂಡಿಲ್ಲ. ರಾಜ್ಯದ ಎ ; ಕಡೆ ಈ ರೀತಿ ಗೇಣಿದಾರರ ಮೇಲೆ ನಡೆಯುತ್ತಿರುವ ಘಟನೆಗಳ ಬಗ್ಗೆ ರಕ್ಷಣೆ ಕೊಡದೆ ಪೋಲಿಸರ ಮೇಲೆ ಏನು ಕ್ರಮ ಕೈಗೊಳ್ಳುತ್ತೀರಿ ?

ಶ್ರೀ ರಮೇಶ ಕುಮಾರ್ –ಪಾಲಸಿ ಮ್ಯಾಟರನ್ನು ಅಳವಡಿಸಿಕೊಂಡು ಮಾನ್ಯ ಸಚಿವರು ಎಲ್ಲವನ್ನೂ ಸ್ಪಷ್ಟವಾಗಿ ಹೇಳಿದ್ದಾರೆ. ಬಹಳ ಸಂತೋಷ. ಈ ಘಟನೆ ಬಗ್ಗೆ ಬೆಳಕು ಚೆಲ್ಲಿದ ಪತ್ರಿಕೆಯನ್ನು ಅಭಿನಂದಿಸ ಬೇಕೆಂದೂ ಅವರು ಹೇಳಿದರು. ಆದರೆ, ಇಲ್ಲಿರುವ ಮೂಲಭೂತ ಸಮಸ್ಯೆ ಏನು ? ಗೇಣಿದಾರರ ಅರ್ಜಿಗಳು ಬೇಗ ಬೇಗ ಇತ್ಯರ್ಥವಾಗಬೇಕು, ವಕೀಲರ ಹಾವಳಿ ಇರಬಾರದು ; ನ್ಯಾಯಸಮ್ಮತವಾದ ತೀರ್ಮಾನವಾಗಬೇಕೆನ್ನುವ ಉದ್ದೇಶದಿಂದಲೇ ಭೂ ಪಂಚಾಯತಿಗಳನ್ನು ರಚನೆ ಮಾಡಿದ ಹಿನ್ನೆಲೆ.

ಶ್ರೀ ಎಂ. ಸಿ. ನಾನಯ್ಯ.—ಬಹುಶಃ ರಮೇಶ್ ಕುಮಾರ್ ಅವರು ವಕೀಲರಲ್ಲ. ಅವರು ''ವಕೀಲರ ಹಾವಳಿ'' ಎಂದು ಹೇಳುವುದರ ಬದಲು ''ವಕೀಲರ ಸಲಹೆ'' ಎಂದು ಹೇಳಬಹುದು.

ಶ್ರೀ ರಮೇಶ್ ಕುಮಾರ್. ಆಗಬಹುದು. ಭೂಶಾಸನವನ್ನು ಸಂಪೂರ್ಣವಾಗಿ ಜಾರಿಗೆ ಕೊಡುವ ಕಾರ್ಯದಲ್ಲಿ ೧೯೭೨ ರಿಂದಲೂ ಸಾಕಷ್ಟು ವಿಳಂಭವಾಗಿದೆ. ಇದು ಬೇಗನೆ ಕಾರ್ಯಗತವಾಗಬೇಕಾದರೆ ಭೂ ಪಂಚಾಯತಿಗಳಲ್ಲಿ ಗೇಣಿದಾರರ ಪರವಾಗಿರುವವರು ಮತ್ತು ಭೂಶಾಸನದಲ್ಲಿ ನಂಬಿಕೆಯುಳ್ಳವರು ಸದಸ್ಯರಾಗಿರಬೇಕು. ಆದರೆ, ಈಗ ರಚಿಸಲಾಗಿರುವ ಹೊಸ ಭೂ ಪಂಚಾಯತಿಗಳಲ್ಲಿ ಈ ಸಿದ್ಧಾಂತದಲ್ಲಿ ನಂಬಿಕೆ ಇರುವವರು ಯಾರೂ ಇಲ್ಲ. ಆದುದರಿಂದ, ನಾನು ಹೇಳುವುದೇನೆಂದರೆ.....

ಶ್ರೀ ಎಸ್. ಬಂಗಾರಪ್ಪ.—ನಾನು ಮೊದಲೇ ಹೇಳಿದ್ದೇನೆ, ಶ್ರೀಮತಿ ಅರಸಮ್ಮನ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾತ್ರ ಇದನ್ನು ಸೀಮಿತ ಮಾಡೋಣ. ವಿವರಗಳಿಗೆ ಹೋಗತಕ್ಕ ಕಾಲವಲ್ಲ ಇದು. ಶ್ರೀಮತಿ ಅರಸಮ್ಮನ ಮಗನಾದ ಶ್ರೀ ಮುನಿಗಂಗಯ್ಯ ಎನ್ನುವವರು ದೂರು ಕೊಟ್ಟಿದ್ದಾರೆ. ಪ್ರಕರಣವನ್ನು ದಾಖಲು ಮಾಡಿಕೊಂಡು ತನಿಖೆ ಮಾಡಿದ್ದಾರೆ. ಪತ್ರಿಕೆಯಲ್ಲಿ ಬಂದಿದೆ ಎಂಬ ಕಾರಣಕ್ಕಾಗಿ ಅಲ್ಲ.

ಶ್ರೀ ಮೊಹಿದ್ದೀನ್.—ಹಾಗಾದರೆ ಅವರು ದೂರು ಕೊಟ್ಟಿದ್ದು ಯಾವಾಗ ಮತ್ತು ಪ್ರಕರಣವನ್ನು ದಾಖಲು ಮಾಡಿಕೊಂಡಿದ್ದು ಯಾವಾಗ ?

ಶ್ರೀ ಎಸ್. ಬಂಗಾರಪ್ಪ.—೧೯ನೇ ತಾರೀಖು ದೂರು ಕೊಟ್ಟಿದ್ದಾರೆ ಮತ್ತು ತಕ್ಷಣವೇ ಪ್ರಕರಣವನ್ನು ದಾಖಲು ಮಾಡಿಕೊಳ್ಳಲಾಗಿದೆ.

11-30 A M.

re :—(ii) release of water to Rampur and Hullahalli cannals in Nanjangud Taluk for raising paddy Crops.

† ಶ್ರೀ ಹೆಚ್ ಗಂಗಾಧರನ್.—ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕಿನಲ್ಲಿ ರಾಮಪುರ ಹಾಗೂ ಹುಲುಹೊಳೆ ಕಾಲುವೆಗಳ ಮುಖಾಂತರ ಸುಮಾರು ೧೪,೮೦೦ ಎಕರೆ ನೀರಾವರಿಯಾಗತಕ್ಕ ಭೂಮಿ ಇದೆ. ಈಗ ನೀರನ್ನು ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ನೀರು ಒದಗಿಸಿ ಕೊಡುತ್ತಿಲ್ಲ. ಈಗಾಗಲೇ ಜೂನ್ ತಿಂಗಳು ಮುಗಿಯಿತು, ಜುಲೈ ತಿಂಗಳು ಪ್ರಾರಂಭವಾಗಿದೆ. ಸಾಕಷ್ಟು ನೀರು ಇದ್ದರೂ, ಅಧಿಕಾರಿಗಳ ಒಂದು ಧೋರಣೆಯಿಂದ ರೈತರಿಗೆ ನೀರು ಉಪಯೋಗಿಸಿ ಬೆಳೆ ಇಡುವುದಕ್ಕೆ ಅವಕಾಶವಾಗಿಲ್ಲ. ''ದೇವರು ವರಕೊಟ್ಟರೂ ಪೂಜಾರಿ ವರ ಕೊಡ'' ಎಂಬಂತಾಗಿದೆ. ಅಧಿಕಾರಿಗಳ ಗಮನಕ್ಕೆ ತಂದರೂ ಕೂಡ ಏನೂ ಪ್ರಯೋಜನವಾಗಿಲ್ಲ ; ಈಗಾಗಲೇ ೧೫ ದಿವಸ ತಡವಾಗಿದೆ. ಇದು ಒಂದು ವರ್ಷವೇ ಅಲ್ಲ ; ಪ್ರತಿವರ್ಷವೂ ಕೂಡ ಇದೆ ಆಗಿದೆ. ಲೋಕೋಪಯೋಗಿ ಇಲಾಖೆಯವರು ರೈತರ ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳದೇ ವಿನಾಕಾರಣ ತೊಂದರೆ ಏತಕ್ಕೆ ಕೊಡಬೇಕು ? ರೈತರಿಗೆ ಸಕಾಲದಲ್ಲಿ ನೀರು ಒದಗಿಸಿಕೊಡದೇ ಹೋದರೆ, ಸಕಾಲದಲ್ಲಿ ಫಸಲು ಇಡದೇ ಹೋದರೆ ರೈತರಿಗೆ ನಷ್ಟವಾಗುವುದಲ್ಲದೆ, ಆ ಮೂಲಕ ರಾಜ್ಯಕ್ಕೆ ನಷ್ಟವಾಗುವುದಿಲ್ಲವೆ ? ಬತ್ತ ಮತ್ತು ರಾಗಿ ಬೆಳೆಗಳಿಗೆ ಕೂಡಲೇ

ನೀರಿನ ಅವಶ್ಯಕತೆ ಇದೆ, ನೀರಿನ ಕೊರತೆ ಇಲ್ಲ, ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಟ್ಟು ಎಷ್ಟು ಕಾಲುವೆಗಳಲ್ಲೂ ನೀರು ಬಿಡುವಂತ ವ್ಯವಸ್ಥೆ ಮಾಡಿಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ.—ಸನ್ಮಾನ್ಯ ಅಧ್ಯಕ್ಷರೇ, ಈ ಎರಡು ಕಾಲುವೆಗಳು ಬಹಳ ಹಳೆಯ ಕಾಲುವೆಗಳು, ತಮಗೂ ಕೂಡ ಇದು ಗೊತ್ತಿದೆ. ಅಚ್ಚುಕಟ್ಟುದಾರರು ಕೂಡ ಬಹಳ ಕಡಿಮೆ ಪ್ರಮಾಣದಲ್ಲಿದ್ದು ಸುಮಾರು ೧೪,೦೦೦ ಎಕರೆ ನೀರಾವರಿಯಾಗುವಂತ ಜಮೀನು ಇದೆ. ಕಬಿನಿ ಮತ್ತು ನುಗು ಜಲಾಶಯಗಳಲ್ಲಿ ನೀರಿನ ಏರಿಕೆ ಜಾಸ್ತಿ ಪ್ರಮಾಣದಲ್ಲಿದ್ದು ನೀರಿನ ಮಟ್ಟವನ್ನು ತಡೆಯುವುದಕ್ಕಾಗುವುದಿಲ್ಲ ಅಪಾಯ ಸ್ಥಿತಿಯಲ್ಲಿದೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಸರ್ಕಾರದ ಧೋರಣೆ ಏನು ಎಂಬುದು ನಮಗೆ ತಿಳಿಯುತ್ತಿಲ್ಲ. ಕೆಳಗಡೆ ಇರತಕ್ಕ ಅಧಿಕಾರಿಗಳಿಗೂ ಕೂಡ ಸರ್ಕಾರದ ಧೋರಣೆಯೇ ಬಂದಿದೆ. ನಾವುಗಳು ಏನೂ ಹೇಳಿದರೂ ಅವರಿಗೆ ಕಿವಿ ಕೇಳುತ್ತಿಲ್ಲ. ಇವತ್ತು ೩೧ನೇ ಕೆಳಗೆ ಈ ವಿಚಾರವನ್ನು ತಂದು ಸರ್ಕಾರದ ನಿಲುವು ಏನೆಂಬುದನ್ನು ಕೇಳಬೇಕಾದ ಪರಿಸ್ಥಿತಿ ಬಂದಿದೆ. ರೈತ ಸಾಲ ಸೋಲ ಮಾಡಿ : ಕಾಲಕ್ಕೆ ಸರಿಯಾಗಿ ಬಿತ್ತನೆ ಕಾರ್ಯಗಳನ್ನು ಮಾಡದೇ ಇದ್ದರೆ ; ಸರ್ಕಾರಕ್ಕೆ ಕೊಡಬೇಕಾದ ಕಂದಾಯ ಮತ್ತಿತರೆ ಸಾಲಸೋಲಗಳನ್ನು ಹೇಗೆ ತೀರಿಸಬೇಕು ? ತೀರಿಸದೇ ಇದ್ದರೆ, ದನಕರುಗಳನ್ನು ಹರಾಜು ಮಾಡಿ ರೈತರನ್ನು ಸುಲಿಗೆ ಮಾಡುತ್ತೀರಿ. ನೀರು ಧಾರಾಳವಾಗಿ ಹರಿಯುತ್ತಿದ್ದರೂ ನೀರು ಬಿಡದೇ ಇರುವುದಕ್ಕೆ ಕಾರಣ ಏನು ? ಪ್ರತಿವರ್ಷವೂ ಜೂನ್ ೧೦ನೇ ತಾರೀಖು ನೀರು ಬಿಡುತ್ತಿದ್ದ ಪದ್ಧತಿಯನ್ನು ಏತಕ್ಕೆ ಬದಲಾವಣೆ ಮಾಡಿದರು ? ಒಂದು ತಿಂಗಳು ತಡವಾಗಿ ನೀರು ಬಿಡುವಂತೆ ಏತಕ್ಕೆ ಮಾಡಿದರು ? ಹೂಳು ತೆಗೆಸಬೇಕು, ರಿಪೇರಿ ಮಾಡಬೇಕೆಂದು ಅಧಿಕಾರಿಗಳು ಹೇಳುತ್ತಿದ್ದಾರೆ ; ಒಂದು ತಿಂಗಳು ಮುಂಚೆ ಹೂಳು ತೆಗೆಸುವ ಕೆಲಸ ರಿಪೇರಿ ಮಾಡುವ ಕೆಲಸ ಮಾಡುವುದಕ್ಕಾಗುತ್ತಿರಲಿಲ್ಲವೆ ? ಎರಡನೆಯದಾಗಿ ಸಲಹಾ ಸಮಿತಿಗಳನ್ನು ನೇಮಕ ಮಾಡಿದ್ದೀರಿ ; ಸಲಹಾ ಸಮಿತಿಯನ್ನು ಕರೆಯುವುದೇ ಇಲ್ಲ ; ಒಂದು ಪಕ್ಷ ಸಲಹಾ ಸಮಿತಿ ಸಲಹೆಗಳನ್ನು ಕೊಟ್ಟರೂ ಕೇಳುವುದಿಲ್ಲ. ನಾಮಕಾವಸ್ಥೆಗೆ ಸಲಹಾ ಸಮಿತಿಗಳನ್ನು ಮಾಡಿದ್ದೀರಿ ; ಎಲ್ಲಾ ವ್ಯವಹಾರವೂ ಅಧಿಕಾರಿಗಳದೇ. ಜನಗಳಿಗೆ ಏನೊಂದು ಉಪಯೋಗ ಮಾಡಬೇಕು ; ಅನುಕೂಲ ಮಾಡಬೇಕು ; ವ್ಯವಸ್ಥೆ ಮಾಡಿಕೊಡಬೇಕು ; ಹೆಚ್ಚಿನ ಸೌಕರ್ಯ ಕಲ್ಪಿಸಿಕೊಡಬೇಕೆಂಬ ಧೋರಣೆಯನ್ನೇ ಸರ್ಕಾರ ಇಟ್ಟುಕೊಂಡಿದೆ ಎಂದು ಹೇಳುತ್ತೀರಿ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ ; ಎಲ್ಲಾ ಒಡಗಿಸಿಕೊಡುವುದಕ್ಕೆ ''ಅಕ್ಷಯಪಾತ್ರೆ'' ಇಟ್ಟುಕೊಂಡು ನಿಂತಿದ್ದೇವೆಂದು ಹೇಳುತ್ತಿದ್ದಾರೆ. ಇಂಥ ಒಂದು ಸಣ್ಣ ತೊಂದರೆಗೆ ತಮ್ಮ ಅಕ್ಷಯ ಪಾತ್ರೆಯಲ್ಲಿ ಬಿಕ್ಷೆ ಇಲ್ಲವೆ ? ನಾವು ಬಲದಿಂದ ರಾಜ್ಯಭಾರ ಮಾಡುತ್ತೇವೆಂದು ತಾವು ಭಾವಿಸಿದ್ದರೆ, ಹಿಂದೆ ಏನು ಅನುಭವಿಸಿದ್ದೀರಿ ಮತ್ತೆ ಅದನ್ನು ಜ್ಞಾಪಿಸಿಕೊಂಡು ರಾಜ್ಯಭಾರ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ರಾಮಪುರ ಹಾಗೂ ಹುಲುಪಳ್ಳಿ ಕಾಲುವೆಗಳಲ್ಲಿ ರೈತರಿಗೆ ಬೇಸಾಯಕ್ಕೆ ಇದುವರೆವಿಗೂ ನೀರು ಬಿಟ್ಟಿಲ್ಲ ಎನ್ನುವ ವಿಚಾರವನ್ನು ಹೇಳಿದ್ದಾರೆ. ಕಳೆದ ವರ್ಷ ಕೂಡ ಕಾಲಕ್ಕೆ ಸರಿಯಾಗಿ ನೀರು ಕೊಟ್ಟಿದ್ದಾರೆ, ಈ ವರ್ಷ ಕೊಡಬಾರದೆನ್ನುವ ಅಭಿಪ್ರಾಯವನ್ನು ಸರ್ಕಾರ ಇಟ್ಟುಕೊಂಡಿಲ್ಲ ಕಾಲುವೆಗಳನ್ನು ಶುದ್ಧಿ ಮಾಡಬೇಕಾಗಿದ್ದುದರಿಂದ ಒಂದು ವಾರ ಮಾತ್ರ ತಡವಾಗಿದೆ. ರೈತರಿಗೆ ತೊಂದರೆ ಕೊಡುವ ಉದ್ದೇಶವೇನೂ ಸರ್ಕಾರಕ್ಕೆ ಇಲ್ಲ. ಬೆಳೆ ಇಡುವುದಕ್ಕೆ ಏನೂ ಅಡ್ಡಿಯಿಲ್ಲ ; ಈ ತಿಂಗಳು ೭ನೇ ತಾರೀಖು ನೀರು ಬಿಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆಂದು ಇಲಾಖೆಯವರು ಜನರಿಗೆಲ್ಲಾ ತಿಳಿಸಿದ್ದಾರೆ. ನೀರು ಬಿಡುವ ವಿಚಾರವನ್ನು ಪ್ರಕಟಣೆ ಮೂಲಕ ಅಚ್ಚು ಹಾಕಿಸಿ ಹಂಚಿದ್ದಾರೆ. ೭ನೇ ತಾರೀಖು ನೀರು ಬಿಡುತ್ತಾರೆ.

ಶ್ರೀ ಹೆಚ್. ಗಂಗಾಧರನ್.—ಕಾಲುವೆಗಳನ್ನು ಶುದ್ಧಿ ಮಾಡುವ ಕೆಲಸವನ್ನು ಮುಂಚಿತವಾಗಿಯೇ ಏತಕ್ಕೆ ಮಾಡಬಾರದಾಗಿತ್ತು ?

ಶ್ರೀ ಎಸ್. ಬಂಗಾರಪ್ಪ.—ವರ್ಷದಲ್ಲಿ ಸರಾಸರಿ ೧೧ ತಿಂಗಳ ಕಾಲ ನೀರು ಹರಿಯುತ್ತೆ. ಯಾವಾಗ ರಿಪೇರಿ ಮಾಡಬೇಕೆನ್ನುವುದೇ ಪ್ರಶ್ನೆಯಾಗಿದೆ.

ಅಧ್ಯಕ್ಷರು.—ರೈತರು ಬೆಳೆಗಳನ್ನು ಕಠಾವು ಮಾಡಿದ ಮೇಲೆ ತಕ್ಷಣ ಕಾಲುವೆಗಳ ಕೆಲಸವನ್ನು ತೆಗೆದುಕೊಂಡರೆ ತೊಂದರೆಯಾಗುವುದಿಲ್ಲ. ಈಗ ಶುರು ಮಾಡಿದ್ದಾರೆ., ಇದು ಸರಿಯಲ್ಲ.

ಶ್ರೀ ಹೆಚ್. ಗಂಗಾಧರನ್.—ಜುಲೈನಲ್ಲಿ ನಾಟಿ ಆದರೆ ಸರಿಯಾಗಿ ಇಳುವರಿ ಬರಂವುದಿಲ್ಲ ; ರೋಗರುಜಿನಗಳು ಜಾಸ್ತಿಯಾಗುತ್ತವೆ. ಮೂರು ದಿನ ಮುಂದೆ ಹೋದರೆ ಬೆಳೆ ನಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಕೂಡ ವ್ಯವಸಾಯಗಾರನೇ ನನಗೂ ಕೂಡ ಗೊತ್ತಿದೆ. ಏನೇ ತಾರೀಖು ನೀರು ಬಿಡುತ್ತೇವೆಂದು ಹೇಳಿದ್ದಾರೆ. ಆದಷ್ಟು ಜಾಗ್ರತೆ ನೀರು ಬಿಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

Representation by Member

Inadequate Publicity given by the press to speeches of Members of Opposition made in the Assembly

SRI B. BASAVALINGAPPA (Yelahanka).—Sir, I want to make a special mention about the publicity made in the Press. I have also given a notice about it. The Press gallery here, specially has been created for the purpose of disseminating the speeches and some of the facts made out here. What I noticed for sometime past is that there has been a consistant low toning of certain party members and high toning of certain persons, particularly from the Government side. This has attracted my attention to make a mention of certain facts. In a democratic set up press is as important an organ as the electorate and an important organ of the Executive, Judiciary or the Legislature. I do not say it is as important as Legislature or electorate, but the freedom enjoyed by the Press is no more than the freedom enjoyed by the Constitution. Under article 92 of the Constitution freedom of speech and expression are guaranteed. We have a right to make a speech and all the citizens have the right to make a speech. But this dissemination of the freedom of the speech and the expression made by the citizens of the country will have to be translated, disseminated by the press in the same way they express. We have a press Gallery here. The Government side is there. The Opposition side is there. The Government side necessarily will have to attract the attention of the press. But what is the role of the Opposition ? The role of the Opposition is as good as the Government, because we sit here as an alternative forum to form the Government. I think Hon'ble Members will remember that a few months ago.

(ಶ್ರೀ ಎಸ್. ಮುನಿರಾಜು ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

those who were sitting here have formed the Government. In this background the persons who are sitting on this side are an alternative to the Government. I have been seeing the publicity made on behalf of the Opposition members by the press. I am not making any complaint about the way they publish, the way they express, the way they suppress certain very important things. But,